ಉತ್ತರ ಕರ್ನಾಟಕ ನಗರಗಳಲ್ಲಿ ಎ.ಡಿ.ಬಿ ಸಂಸ್ಥೆಯ ಹಣಕಾಸಿನ ನೆರವಿನಿಂದ ಮೂಲಭೂತ ಸೌಲಭ್ಯ

140 (551) ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕರ್ನಾಟಕ ನಗರಗಳಲ್ಲಿ ಎ.ಡಿ.ಬಿ. ಸಂಸ್ಥೆಯ ಹಣಕಾಸಿನ ನೆರವಿನೊಂದಿಗೆ ಮೂಲಭೂತ ಸೌಲಭ್ಯಗಳನ್ನು ಸೃಷ್ಟಿಸುವ ಕಾರ್ಯಕ್ರಮ ಈಗ ಯಾವ ಹಂತದಲ್ಲಿದೆ.

ಆ) ಈ ಯೋಜನೆಯು ಯಾವಾಗ ಪ್ರಾರಂಭವಾಗುವುದು:

ಇ) ಈ ಭಾಗದ ಎಲ್ಲಾ ನಗರ ಪ್ರದೇಶಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಒಟ್ಟು ಹಣ ಎಷ್ಟು:

ಈ) ಅದರಲ್ಲಿ ಎ.ಡಿ.ಬಿ. ಯಿಂದ ದೊರೆಯುವ ಸಾಲದ ಪಾಲು ಎಷ್ಟು:

ಉ) ಈ ಹಣ ಪ್ರಾರಂಭಿಕ ಗುರಿಯಾದ 700 ದಶಲಕ್ಷ ಡಾಲರಿಗಿಂತ ಕಡಿಮೆಯಾಗಿದೆಯೇ:

ಊ) ಈ ಭಾಗದ ಎಲ್ಲಾ ನಗರಗಳಿಗೆ ಸಂಪೂರ್ಣ ಮೂಲಭೂತ ಸೌಲಭ್ಯ ಒದಗಿಸಲು ಬೇಕಾಗಬಹುದಾದ ಒಟ್ಟು ಹಣ ಎಷ್ಟು (ನಗರವಾರು ಮಾಹಿತಿ ನೀಡುವುದು)

ಋ) ಈ ಯೋಜನೆ ವೆಚ್ಚವನ್ನು ಕಡಿತಗೊಳಿಸಲು ಕಾರಣಗಳೇನು:

ಎ) ಈ ಮೊದಲು ಕರಾವಳಿ ಭಾಗದ ನಗರಗಳ ಮೂಲಭೂತ ಸೌಕರ್ಯ ಸೃಷ್ಟಿಗಾಗಿ ಒದಗಿಸಿದ ತಲಾನುದಾನಕ್ಕಿಂತ ಉತ್ತರ ಕರ್ನಾಟಕ ನಗರಗಳಿಗೆ ಒದಗಿಸಿದ ತಲಾನುದಾನ ಎಷ್ಟು: ಕಡಿಮೆಯಾಗಿದ್ದರೆ ಕಾರಣಗಳೇನು:

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ವಿಷ್ಕಿಯನ್ ಅಭಿವೃದ್ಧಿ ಬ್ಯಾಂಕ್ ಲೋನ್ ಅಪ್ರೈಸಲ್‌ನ್ನು ಮುಗಿಸಿದೆ.

ಆ) ಎಡಿಬಿ ಸಾಲದ ಪ್ರಕ್ರಿಯೆಗಳು ಮುಕ್ತಾಯಗೊಂಡ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಸಮಾಲೋಚಕರ ನೇಮಕಾತಿಯ ಪ್ರಕ್ರಿಯೆ ಈಗಾಗಲೇ ಪ್ರಗತಿಯಲ್ಲಿದೆ.

ಇ) ಯು.ಎಸ್. ಡಾಲರ್ 440 ಮಿಲಿಯನ್‌ಗಳಾಗಿರುತ್ತವೆ. (ರೂ.1980/- ಕೋಟಿಗಳು)

ಈ) ಯು.ಎಸ್. ಡಾಲರ್ 264 ಮಿಲಿಯನ್‌ಗಳಷ್ಟಾಗಿರುತ್ತವೆ. (ರೂ.1188/- ಕೋಟಿಗಳು)

ಉ) ಊ) ಋ) ಯೋಜನೆಯ ತಯಾರಿಕಾ ವರದಿಯ ಪ್ರಕಾರ ಎನ್‌ಕೆಯುಎಸ್‌ಐಪಿ ಯೋಜನಾ ಪಟ್ಟಣಗಳ ಒಟ್ಟು ಅಗತ್ಯತೆಗಳನ್ನು ಅಧ್ಯಯನ ಮಾಡಲಾಯಿತು. ಪುರಸಭೆಗಳ ಪ್ರಮುಖ ಮೂಲಭೂತ ಸೌಕರ್ಯಗಳನ್ನು ಮತ್ತು ಯೋಜನಾ ಅವಧಿಯೊಳಗೆ